ಆ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94 ಎ (4)ರ 2ನೇ ಪರಂತುಕದ ಪಟ್ಟಿಯನ್ವಯ ಪುರಸಭಾ ವ್ಯಾಪ್ತಿಯ 5 ಕಿ.ಮೀಟರ್ ಗಡಿಯೊಳಗಿನ ಅನಧಿಕೃತ ಸಾಗುವಳಿ ಜಮೀನುಗಳನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಕೇಂದ್ರೀಯ ರಸ್ತೆ ನಿಧಿಯಿಂದ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಪಡಿಸಿದ ರಸ್ತೆಗಳ ವಿವರ

2456 (2709) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರೀಯ ರಸ್ತೆ ನಿಧಿಯಿಂದ 1999--2000 ನಂತರ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಪಡಿಸಿದ ರಸ್ತೆಗಳ ವಿವರ ಹಾಗೂ ಖರ್ಚು ಮಾಡಿದ ಮೊತ್ತವೆಷ್ಟು;

ಆ) ಬಾಕಿ ಉಳಿದಿರುವ ರಸ್ತೆಗಳ ಅಭಿವೃದ್ಧಿಯ ವಿವರ ಹಾಗೂ ಅದಕ್ಕಾಗಿ ಮಂಜೂರಾದ ಮೊತ್ತವೆಷ್ಟು;

ಇ) ಆ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಕೇಂದ್ರ ರಸ್ತೆ ನಿಧಿಯಿಂದ 1999–2000ರ ನಂತರ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಬ್ರಹ್ಮಾವರ–ಸೀತಾನದಿ ಜಿಲ್ಲಾ ಮುಖ್ಯ ರಸ್ತೆಯ ಕಿಮೀ 10.50 ರಿಂದ 15.00 ಕಿಮೀ ವರೆಗೆ ಹಾಗೂ 18.50 ಕಿಮೀ ನಿಂದ 24.00 ಕಿಮೀ ವರೆಗೆ ಒಟ್ಟು 10.00 ಕಿಮೀ ಉದ್ದದ ರಸ್ತೆಯನ್ನು ರೂ. 60.00 ಲಕ್ಷ ವೆಚ್ಚದಲ್ಲಿ ಡಾಂಬರೀಕರಣ ಮಾಡಿ ಕಾಮಗಾರಿ ಸಂಪೂರ್ಣ ಗೊಳಿಸಲಾಗಿದೆ.

ಆ) ಬಾಕಿ ಉಳಿದ ರಸ್ತೆಗಳ ಅಭಿವೃದ್ಧಿಗೆ ಕೇಂದ್ರ ರಸ್ತೆ ನಿಧಿಯಿಂದ ಯಾವುದೇ ಅನುಮೋದನೆ ದೊರಕಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಬಾಕಿ ಇರುವ ಅಕ್ರಮ–ಸಕ್ರಮ ಕಡತಗಳು

2457 (2710) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಇರುವ ಅಕ್ರಮ–ಸಕ್ರಮ ಕಡತಗಳು ಎಷ್ಟು;

ಆ) ಕೋಟಾ ಮತ್ತು ಬ್ರಹ್ಮಾವರ ಹೋಬಳಿಯಲ್ಲಿ ಬಾಕಿ ಇರುವ ಕಡತಗಳ ವಿವರ ನೀಡುವುದು;

ಇ) ಅವುಗಳು ಯಾವ ಹಂತದಲ್ಲಿ ಇವೆ;

ಈ) ಕಡತಗಳನ್ನು ಅಕ್ರಮ–ಸಕ್ರಮ ಸಮಿತಿಯ ಮುಂದೆ ಸಲ್ಲಿಸಲು ವಿಳಂಬವಾಗಲು ಕಾರಣವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ನಮೂನೆ–50	ನಮೂನೆ–53
852	7894

ಆ) ಕೋಟಾ ಹೋಬಳಿ	ಬಾಕಿ ಕಡತ
ನಮೂನೆ–50	ನಮೂನೆ–53
323	529
ಬ್ರಹ್ಮಾವರ ಹೋಬಳಿ	ಬಾಕಿ ಕಡತ
ನಮೂನೆ–50	ನಮೂನೆ–53
3,459	4,435

ಇ) ಮತ್ತು ಈ) ಕೋಟಾ ಮತ್ತು ಬ್ರಹ್ಮಾವರ ಹೋಬಳಿಗಳಲ್ಲಿ ಕಾದಿರಿಸಿದ ಅರಣ್ಯ ಪ್ರದೇಶವಿರುತ್ತದೆ. ಸಮಿತಿ ಮುಂದೆ ಮಂಡಿಸುವ ಮುನ್ನ ಅರಣ್ಯ ಇಲಾಖೆ ಅಭಿಪ್ರಾಯ ಪಡೆಯಬೇಕಾಗಿರುವುದರಿಂದ ವಿಳಂಬವಾಗುತ್ತಿದೆ.

ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸುವುದು

2458 (2838) : ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಬ್ಯಾಲಾಳು ಗ್ರಾಮದಲ್ಲಿ ಸರ್ವೆ ನಂಬರ್ 50ರಲ್ಲಿ ಬಗರ್ ಹುಕುಂ ಸಾಗುವಳಿ ಮಾಡಲಾಗುತ್ತಿದೆಯೇ;

ಆ) ಹೌದಾದಲ್ಲಿ, ಎಷ್ಟು ವರ್ಷಗಳಿಂದ ಯಾರ್ಯಾರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ; (ಸಾಗುವಳಿದಾರರ ವಿವರ ನೀಡುವುದು)

ಇ) ಈ ಸಾಗುವಳಿದಾರರಿಗೆ ಸಾಗುವಳಿ ಪತ್ರವನ್ನು ನೀಡಲು ಸರಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು

ಆ) ಬ್ಯಾಲಾಳು ಗ್ರಾಮದ ಸ.ನಂ. 50ರಲ್ಲಿ 15 ಜನರು ಕಳೆದ 30–35 ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದು, ಸಕ್ರಮ ಕೋರಿ ನಮೂನೆ 50 ಮತ್ತು 53ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸಮಿತಿಯು ಶ್ರೀ ಮಾರಯ್ಯನವರಿಗೆ 1.31 ಶ್ರೀ ರಘುವಯ್ಯನವರಿಗೆ 3.13 ಮತ್ತು ಶ್ರೀ ಕೆಂಪರಸಯ್ಯನವರಿಗೆ 2.13 ಎಕರೆಗುಂಟೆ ಜಮೀನನ್ನು ಸಕ್ರಮಗೊಳಿಸಿ ಸಾಗುವಳಿ ಚೀಟಿಯನ್ನು ನೀಡಲಾಗಿದೆ.

ಇ) ಬಾಕಿ ಇರುವ ಅರ್ಜಿಗಳನ್ನು ಬಗರ್ ಹುಕುಂ ಸಾಗುವಳಿ ಸಮಿತಿ ಮುಂದೆ ಇಟ್ಟು ಸಮಿತಿಯು ಶಿಫಾರಸ್ಸಿನಂತೆ ಅರ್ಹರಾದವರಿಗೆ ಸಾಗುವಳಿ ಚೀಟಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವುದು

2459 (3146) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೇ;

ಆ) ಹಾಗಿದ್ದಲ್ಲಿ, ಎಷ್ಟು ಕಿಮೀ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗುವುದು;